# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ:ಬೃ.ಬೆ.ಮ.ಪಾ/ಸಕಾಅ/ಮಾಉವಿ/ಪಿಆರ್/212/1/2021-22 ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ
ಮಾರತ್ತಹಳ್ಳಿ ಉಪವಿಭಾಗ
ಬಿಬಿಎಂಪಿ, ಬೆಂಗಳೂರು.
ದಿನಾಂಕ: 25.10.2021.

## 150 ಬೆಳ್ಳಂದೂರು ವಾರ್ಡ್ ಸಮಿತಿ ಸಭೆಯ ನಡವಳಿಗಳು:

***********

ದಿನಾಂಕ:-25/10/2021 ಬೆಳಿಗ್ಗೆ 11:30 ಗಂಟೆಗೆ ವಾರ್ಡ್ ಸಮಿತಿ ಸಭೆಯನ್ನು ಮನ್ಯ ಶಾಸಕರು ಹಾಗೂ ಮಾಜಿ ಸಚಿವರು ಮತ್ತು ಶ್ರೀ.ಪುಟ್ಟಪ್ಪ ನೋಡಲ್ ಅಧಿಕಾರಿರವರ ಅಧ್ಯಕ್ಷತೆಯಲ್ಲಿ ನಡೆದ ನಡವಳಿಗಳು.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಸದಸ್ಯರು, ವಾರ್ಡ್ ಲೇಔಟ್ ಕ್ಷೇಮಾಭಿವೃದ್ಧಿ ಸಂಘದ ಪದಾಧಿಕಾರಿಗಳು ಹಾಗೂ ಸ್ಥಳೀಯ ನಿವಾಸಿಗಳು:-**

1. ಶ್ರೀ.ಅರವಿಂದ ಲಿಂಬಾವಳಿ – ಸನ್ಮಾನ್ಯ ಶಾಸಕರು
2. ಶ್ರೀ.ಮನೋಹರ್ ರೆಡ್ಡಿ – ವಾರ್ಡ್ ಜನಪ್ರತಿನಿಧಿಗಳು
3. ಶ್ರೀ.ರಾಜಾರೆಡ್ಡಿ – ವಾರ್ಡ್ ಜನಪ್ರತಿನಿಧಿಗಳು
4. ಶ್ರೀ.ಸುಬಾಷ್ ಚಂದ್ರ – ವಾರ್ಡ್ ಜನಪ್ರತಿನಿಧಿಗಳು
5. ಶ್ರೀ ಪುಟ್ಟಪ್ಪ – ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
6. ಶ್ರೀ ಚೇತನ್ ಕೆ.ಎಂ – ಕಾರ್ಯದರ್ಶಿಗಳು ಹಾಗೂ ಸಹಯಕ ಅಭಿಯಂತರರು ವಾರ್ಡ್-150
7. ಶ್ರೀ ಅಂಬರೀಶ್ ನಾಯರ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.
8. ಶ್ರೀ ಎ.ರಮೇಶ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.
9. ಶ್ರೀ.ವಸಂತ್ ರೆಡ್ಡಿ – ವಾರ್ಡ್ ಸಮಿತಿ ಸಭೆಯ ಸದಸ್ಯರು.
10. ಶ್ರೀ.ಸುರೇಶ್ – ವಾರ್ಡ್ ಸಮಿತಿ ಸಭೆಯ ಸದಸ್ಯರು.
11. ಸೋಮಶೇಖರ್ ರೆಡ್ಡಿ – ದೊಡ್ಡಕನ್ನೆಲ್ಲಿ ಗ್ರಾಮದ ಜನಪ್ರತಿನಿಧಿ
12. ಶ್ರೀ.ಪ್ರಭಾಕರ್ – ಸೆರಿನಿಟಿ ಲೇಔಟ್ ನಿವಾಸಿಗಳ ಅಧ್ಯಕ್ಷರು.
13. ಶ್ರೀ.ಶೇಖರ್ ರೆಡ್ಡಿ – ಕೈಕೊಂಡ್ರಹಳ್ಳಿ ಗ್ರಾಮದ ಜನಪ್ರತಿನಿಧಿ.
14. ಶ್ರೀ.ನವೀನ್ – ಕೈಕೊಂಡ್ರಹಳ್ಳಿ ಗ್ರಾಮದ ಜನಪ್ರತಿನಿಧಿ.
15. ಶ್ರೀ.ಪ್ರಶಾಂತ್ – ಕೈಕೊಂಡ್ರಹಳ್ಳಿ ಗ್ರಾಮದ ಜನಪ್ರತಿನಿಧಿ.
16. ಶ್ರೀ.ಉಮಾಶಂಕರ್ – ದೇವರಬೀಸನಹಳ್ಳಿ ಗ್ರಾಮದ ಜನಪ್ರತಿನಿಧಿ.
17. ಶ್ರೀ.ಶ್ರೀನಿವಾಸ್ ರೆಡ್ಡಿ – ದೇವರಬೀಸನಹಳ್ಳಿ ಗ್ರಾಮದ ಜನಪ್ರತಿನಿಧಿ.
18. ಶ್ರೀ.ಶಾಮಣ್ಣ – ದೇವರಬೀಸನಹಳ್ಳಿ ಗ್ರಾಮದ ಜನಪ್ರತಿನಿಧಿ.
19. ಶ್ರೀ.ಮಿಥುನ್ ರೆಡ್ಡಿ – ಬೆಳ್ಳಂದೂರು ಗ್ರಾಮದ ಜನಪ್ರತಿನಿಧಿ
20. ಶ್ರೀ.ಹೇಮಣ್ಣ – ಬೆಳ್ಳಂದೂರು ಗ್ರಾಮದ ಜನಪ್ರತಿನಿಧಿ.
21. ಶ್ರೀ.ಹೇಮಂತ್ – ಹರಳೂರು ಗ್ರಾಮದ ಜನಪ್ರತಿನಿಧಿ.
22. ಶ್ರೀ.ಮಂಜುನಾಥ್ – ಕಸವನಹಳ್ಳಿ ಗ್ರಾಮದ ಜನಪ್ರತಿನಿಧಿ.
23. ಶ್ರೀ.ರಾಜಣ್ಣ – ಕಸವನಹಳ್ಳಿ ಗ್ರಾಮದ ಜನಪ್ರತಿನಿಧಿ.
24. ಶ್ರೀ.ಲೋಕೇಶ್ – ಕಸವನಹಳ್ಳಿ ಗ್ರಾಮದ ಜನಪ್ರತಿನಿಧಿ.
25. ಶ್ರೀ.ಚಂದನ್ – ಅಂಬಲೀಪುರ ಗ್ರಾಮದ ಜನಪ್ರತಿನಿಧಿ
26. ಶ್ರೀ.ವೇಣುಗೋಪಾಲ್ - ದೊಡ್ಡಕನ್ನೆಲ್ಲಿ ಗ್ರಾಮದ ಜನಪ್ರತಿನಿಧಿ.
27. ಶ್ರೀ.ರಾಜಾರೆಡ್ಡಿ – ಬೆಳ್ಳಂದೂರು ಗ್ರಾಮದ ಜನಪ್ರತಿನಿಧಿ.

**ವಾರ್ಡ್ ಸಮಿತಿ ಸಭೆಗೆ ಹಾಜರಾದ ಅಧಿಕಾರಿಗಳು:-**

1. ಶ್ರೀ.ಅರುಣ್ - ಸ.ಕಾ.ಅ ಮಾರತ್ತಹಳ್ಳಿ ಉಪವಿಭಾಗ
2. ಶ್ರೀ.ಡಿ.ಎಂ.ಮುನಿರೆಡ್ಡಿ - ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ
3. ಶ್ರೀ ಜಿ.ಎಸ್.ಸಿದ್ದಲಿಂಗಯ್ಯ - ಸಹ ಕಂದಾಯ ಅಧಿಕಾರಿಗಳು, ಮಾರತ್ತಹಳ್ಳಿ ಉಪವಿಭಾಗ.
4. ಶ್ರೀ ಮಹೇಶ್ ಕುಮಾರ್ - ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150
5. ಶ್ರೀ. ರಾಜಣ್ಣ - ಹಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150
6. ಶ್ರೀ. ಹರೀಶ್ - ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್ ನಂ.150
7. ಶ್ರೀ. ಡಾ॥ಅನಿಲ್ ಎ.ವಿ - ದೊಡ್ಡಕನ್ನೆಲ್ಲಿ ಆರೋಗ್ಯ ಪ್ರಾಥಮಿಕ ಕೇಂದ್ರ
8. ಶ್ರೀ.ರಾಘವೇಂದ್ರ ಆರ್ - ಸ.ಕಾ.ಅ (ಬಿಡಬ್ಲ್ಯೂಎಸ್ಎಸ್‌ಬಿ)
9. ಶ್ರೀ.ವಿನಯ್ ಕುಮಾರ್ ಐ.ಕೆ - ಸ.ಕಾ.ಅ (ಬಿಡಬ್ಲ್ಯೂಎಸ್ಎಸ್‌ಬಿ)
10. ಶ್ರೀ.ಕೆ.ನಾಗರಾಜ್ - ಸ.ಕಾ.ನಿ.ಅ (ದಾಪೂ-3) ಬೆಂ.ಜ.ಮಂಡಳಿ
11. ಶ್ರೀ.ಎನ್.ಮಿಥುನ್ - ಕೆಲಸ ಪರಿವೀಕ್ಷಕರು (ಬಿಡಬ್ಲ್ಯೂಎಸ್ಎಸ್‌ಬಿ)
12. ಶ್ರೀ.ಮಂಜುನಾಥ್ ಜಿ.ಬಿ - ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ)
13. ಶ್ರೀ.ಲತೀಫ್ ಸಹೇಬ್ - ಸಹಾಯಕ ಅಭಿಯಂತರರು (ಬಿಡಬ್ಲ್ಯೂಎಸ್ಎಸ್‌ಬಿ)
14. ಶ್ರೀ.ಬಿ.ವಿ.ಜಯಶಂಕರ್ ರೆಡ್ಡಿ - ಕಾರ್ಯಪಾಲಕ ಅಭಿಯಂತರರು(ರಸ್ತೆ ಮೂಲಭೂತ ಸೌಕರ್ಯ)
15. ಶ್ರೀ. ಸಂದೇಶ್ ಶೆಟ್ಟಿ - ಸ.ಕಾ.ಅ (ರಸ್ತೆ ಮೂಲಭೂತ ಸೌಕರ್ಯ)
16. ಶ್ರೀ. ಶಿವಾನಂದ್ ನಿರ್ವಾನಿ - ಸಹಾಯಕ ಅಭಿಯಂತರರು (ರಸ್ತೆ ಮೂಲಭೂತ ಸೌಕರ್ಯ)
17. ಶ್ರೀ. ಶ್ರೀ.ನಾಗರಾಜ್ ಎನ್ - ಸಹಾಯಕ ಅಭಿಯಂತರರು (ಬೆಸ್ಕಾಂ)
18. ಶ್ರೀ.ಎಲ್.ಎನ್.ರೆಡ್ಡಿ - ಸಹಾಯಕ ಅಭಿಯಂತರರು (ಬೆಸ್ಕಾಂ)
19. ಶ್ರೀ.ಮಹೇಶ್ ಆಲಮ್ - ಸಹಾಯಕ ಅಭಿಯಂತರರು (ಬೆಸ್ಕಾಂ)
20. ಶ್ರೀ.ಸೋಮಶೇಖರ್ - ಸಹಾಯಕ ಅಭಿಯಂತರರು (ಬೆಸ್ಕಾಂ)
21. ಶ್ರೀ.ರಾಜಶೇಖರ್ - ಸಹಾಯಕ ಅಭಿಯಂತರರು (ಬೆಸ್ಕಾಂ)
22. ಶ್ರೀ.ಲಕ್ಷ್ಮಿ ನಾರಾಯಣ - ಸಹಾಯಕ ಅಭಿಯಂತರರು (ವಿದ್ಯುತ್)
23. ಶ್ರೀಮತಿ.ಮೋಹನ್ ನಂದಾ ಎಸ್ ರೆಡ್ಡಿ - ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ (ಬೆಳ್ಳಂದೂರು ಪೊಲೀಸ್ ಠಾಣೆ)
24. ಶ್ರೀ.ಸಿ.ವಿಜಯ್ ಕುಮಾರ್ - ಹೆಚ್.ಎಸ್.ಆರ್ ಸಂಚಾರಿ ಪೊಲೀಸ್ ವಿಭಾಗ
25. ಶ್ರೀ.ಮಹಂತೇಶ್ ಗೌಡ - ಹೆಚ್.ಎಸ್.ಆರ್ ಸಂಚಾರಿ ಪೊಲೀಸ್ ವಿಭಾಗ
26. ಶ್ರೀ.ಶರತ್ ಕುಮಾರ್ - ಸಹಾಯಕ ಅಭಿಯಂತರರು
27. ಶ್ರೀ.ಶೇಖರ್ - ಎಲೆಕ್ಟ್ರಿಕಲ್ ಗುತ್ತಿಗೆದಾರರು.
28. ಶ್ರೀ.ಶಿವರಾಜ್ ಎಂ - ತೆರಿಗೆ ನಿರೀಕ್ಷಕರು ವಾರ್ಡ್ ನಂ.150
29. ಶ್ರೀ.ಹೆಚ್.ಎಂ.ರಮೇಶ್ - ತೆರಿಗೆ ನಿರೀಕ್ಷಕರು ವಾರ್ಡ್ ನಂ.150
30. ಶ್ರೀ.ಎ.ಜಿ.ಬಾಬು - ಕಂದಾಯ ಪರಿವೀಕ್ಷಕರು ವಾರ್ಡ್ ನಂ.150
31. ಶ್ರೀ.ದೀಪೇಶ್ ಪಾತ್ರ - ಗ್ರೀನ್‌ಗ್ಲೇನ್ ಲೇಔಟ್ ನಿವಾಸಿ.
32. ಶ್ರೀ. ದಯಾಕರ್ ಎಂ.ವಿ - ರಾಯಲ್ ಪ್ಲಾಸಿಡ್ ಫೇಸ್-1 ನಿವಾಸಿ.
33. ಶ್ರೀ. ಸತೀಶ್ ಎಂ - ಹರಳೂರು ನಿವಾಸಿ.
34. ಶ್ರೀ.ಶ್ರೀಜಿತ್ - ಶೋಭಾ ಕ್ಲಾಸಿಕ್ ಅಪಾರ್ಟ್‌ಮೆಂಟ್ ನಿವಾಸಿ.
35. ಶ್ರೀ.ದಿಲೀಪ್ - ಕೆ.ಪಿ.ಸಿ.ಎಲ್ ಲೇಔಟ್, ಕಸವನಹಳ್ಳಿ ನಿವಾಸಿ.
36. ಶ್ರೀ.ಪಂಡಿತ್ ಎಂ - ರಿಲೇಬಲ್ ರೆಸಿಡೆನ್ಸಿ ಲೇಔಟ್ ನಿವಾಸಿ.
37. ಶ್ರೀ.ದಿನೇಶ್ - ದೇವರಬೀಸನಹಳ್ಳಿ ನಿವಾಸಿ.
38. ಶ್ರೀ.ಶೈಲೇಶ್ ಸುಮನ್ - ಕಾಡುಬೀಸನಹಳ್ಳಿ ನಿವಾಸಿ.

ಶ್ರೀ.ಡಿ.ಎಂ.ಮುನಿರೆಡ್ಡಿ ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ ರವರು, ಶ್ರೀ.ಪುಟ್ಟಪ್ಪ ನೋಡಲ್ ಅಧಿಕಾರಿ ವಾರ್ಡ್-150 ಬೆಳ್ಳಂದೂರು ರವರು ಸಭೆಯಲ್ಲಿ ಹಾಜರಿದ್ದ ಗೌರವಾನ್ವಿತ ಮಾನ್ಯ ಶಾಸಕರಿಗೆ, ವಾರ್ಡ್ ಸಭೆಯ ಸದಸ್ಯರು, ವಾರ್ಡಿನ ಜನಪ್ರತಿನಿಧಿಗಳು ಹಾಗೂ ಹಾಜರಿದ್ದ ಅಧಿಕಾರಿಗಳನ್ನು ಸ್ವಾಗತಿಸಿ ಮಾತನಾಡುತ್ತಾ ವಾರ್ಡ್‌ನ ಕುಂದು ಕೊರತೆಗಳನ್ನು ಚರ್ಚಿಸುವುದಾಗಿ ತಿಳಿಸಿದರು.

- **ಬೃಹತ್ ನೀರುಗಾಲುವೆ ಬಗ್ಗೆ**

ಹರಳೂರು ಗ್ರಾಮದ ಲೇಕ್‌ಡ್ಯೂ ರೆಸಿಡೆನ್ಸಿಯಲ್ಲಿ ಬೃಹತ್ ನೀರುಗಾಲುವೆಯ ಹೂಳನ್ನು ತೆಗೆಯಲು ಶ್ರೀ.ಹೇಮಂತ್ ರವರು ಈ ಹಿಂದೆ ಸಭೆಯಲ್ಲಿ ಸೂಚಿಸಿರುತ್ತಾರೆ. ಅದರಂತೆ ಸಭೆಯಲ್ಲಿ ಹಾಜರಿದ್ದ ಶ್ರೀ.ರಾಘವೇಂದ್ರ ಸ.ಕಾ.ಅ (ಬೃಹತ್ ನೀರುಗಾಲುವೆ ವಿಭಾಗ) ರವರಿಗೆ ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ಮಾನ್ಯ ಶಾಸಕರು ತಿಳಿಸಿದರು.

- **ಕಸ ಸಮಸ್ಯೆ ಮತ್ತು ನಿರ್ವಹಣೆ ಬಗ್ಗೆ**

ಕಸವನಹಳ್ಳಿ ಮುಖ್ಯರಸ್ತೆಯ ಚರ್ಚ್‌ಸ್ಟ್ರೀಟ್ ಸಮೀಪದ ರಸ್ತೆ ಬದಿಯಲ್ಲಿ ಕಸ ಹಾಕುತ್ತಿರುವ ಬಗ್ಗೆ ಈ ಹಿಂದೆ ನಡೆದ ಸಭೆಯಲ್ಲಿ ಕಸವನಹಳ್ಳಿಯ ಸ್ಥಳೀಯ ನಿವಾಸಿಗಳು ತಿಳಿಸಿರುತ್ತಾರೆ. ಅದರಂತೆ ಸದರಿ ವಿಷಯದ ಸಂಬಂಧ ನೋಡಲ್ ಅಧಿಕಾರಿಗಳು ಸದರಿ ಸಭೆಯಲ್ಲಿ ಹಾಜರಿದ್ದ ಆರೋಗ್ಯ ಪರಿವೀಕ್ಷಕರಾದ ಶ್ರೀ.ಮಹೇಶ್ ಕುಮಾರ್ ರವರು ಸದರಿ ವಿಷಯದ ಬಗ್ಗೆ ಕ್ರಮ ಕೈಗೊಂಡಿರುವುದಾಗಿ ಸಭೆಯಲ್ಲಿ ತಿಳಿಸಿರುತ್ತಾರೆ.

- **ಕೋವಿಡ್–19 ಬಗ್ಗೆ.**

ವಾರ್ಡ್ ಸಂಖ್ಯೆ–150 ವ್ಯಾಪ್ತಿಯಲ್ಲಿ ಇಲ್ಲಿಯವರೆಗೂ ಒಟ್ಟಾರೆ 42 ಜನರಿಗೆ ಕೋವಿಡ್ ದೃಢಿಕರಣವಾಗಿರುತ್ತದೆ. ಅದರಲ್ಲಿ 40 ಮಂದಿ ಹೋ ಐಸೋಲೇಷನ್‌ನಲ್ಲಿರುವುದಾಗಿ ಹಾಗೂ ಲಸಿಕೆ ಅಭಿಯಾನವನ್ನು ದೊಡ್ಡಕನ್ನೆಲ್ಲಿಯ ಸರ್ಕಾರಿ ಆಸ್ಪತ್ರೆಯಲ್ಲಿ ಲಸಿಕೆಯನ್ನು ಹಾಕುತ್ತಿರುವುದಾಗಿ ಸಭೆಯಲ್ಲಿ ಹಾಜರಿದ್ದ ಡಾ॥ಅನಿಲ್ (ಮೆಡಿಕಲ್ ಆಫೀಸರ್)ರವರು ಸಭೆಯಲ್ಲಿ ತಿಳಿಸಿದರು.

- **ಬೀದಿ ದೀಪ ನಿರ್ವಹಣೆ ಬಗ್ಗೆ.**

ಕೈಕೊಂಡ್ರಹಳ್ಳಿ ಗ್ರಾಮದಲ್ಲಿರುವ ರಸ್ತೆ ಬದಿಯ ಬೀದಿದೀಪಗಳು ಸಮರ್ಪಕವಾಗಿ ಕಾರ್ಯ ನಿರ್ವಹಿಸುತ್ತಿಲ್ಲವೆಂದು ಸಭೆಯಲ್ಲಿ ಶ್ರೀ.ಪ್ರದೀಪ್ ಹಾಗೂ ಶ್ರೀ.ಶೇಖರ್ ರೆಡ್ಡಿ ರವರು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಸದರಿ ಬೀದಿ ದೀಪ ಕಂಬಗಳಿಗೆ ಎಲ್.ಇ.ಡಿ ದೀಪಗಳನ್ನು ಅಳವಡಿಸಲು ಸೂಚಿಸಿದರು. ಸಭೆಯಲ್ಲಿ ಹಾಜರಿದ್ದ ಬಿಬಿಎಂಪಿ ವಿದ್ಯುತ್ ವಿಭಾಗದ ಅಧಿಕಾರಿಗಳಿಗೆ ಸದರಿ ವಿಷಯದ ಬಗ್ಗೆ ಕ್ರಮ ಕೈಗೊಳ್ಳಲು ಸಭೆಯಲ್ಲಿ ಮತ್ತೊಮ್ಮೆ ನೋಡೆಲ್ ಅಧಿಕಾರಿಗಳು ಸೂಚಿಸಿದರು.

- **ಬಿ.ಡಬ್ಲ್ಯೂಎಸ್.ಎಸ್.ಬಿ ಸಮಸ್ಯೆಗಳ ಬಗ್ಗೆ**

ಬಿಡಬ್ಲ್ಯೂಎಸ್‌ಎಸ್‌ಬಿ ವಿಭಾಗಕ್ಕೆ ಸಂಬಂಧಿಸಿದಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸದಸ್ಯರುಗಳು ತಮ್ಮ ಗ್ರಾಮದಲ್ಲಿ ಪ್ರಗತಿಯಲ್ಲಿರುವ ಒಳಚರಂಡಿ ಹಾಗೂ ಕುಡಿಯುವ ನೀರಿನ ಪೈಪ್‌ಲೈನ್ ಕಾಮಗಾರಿಯನ್ನು ನಿಗದಿತ ಸಮಯದಲ್ಲಿ ಪೂರ್ಣಗೊಳಿಸಲು ಸಭೆಯಲ್ಲಿ ತಿಳಿಸಿದರು. ಸದರಿ ಕಾಮಗಾರಿಯನ್ನು ನಿರ್ವಹಿಸುತ್ತಿರುವ ರಸ್ತೆಗಳಲ್ಲಿ ಸದರಿ ಕಾಮಗಾರಿಗಳಿಂದ ರಸ್ತೆಗೆ ಅಗಿರುವ ದುರಸ್ಥಿಯನ್ನು ಸರಿಪಡಿಸಿ ಸುಗುಮ ಸಂಚಾರಕ್ಕೆ ಅನುವು ಮಾಡಿಕೊಡಲು ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂದ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳಿಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಶಾಸಕರು ಅಧಿಕಾರಿಗಳಿಗೆ ತಿಳಿಸಿದರು.

- **ಪಾದಚಾರಿ ಒತ್ತುವರಿ ಬಗ್ಗೆ.**

ಬೆಳ್ಳಂದೂರು ಗ್ರಾಮದ ಗ್ರೀನ್‌ಗ್ಲೇನ್ ಲೇಔಟ್‌ನ ಪಾದಚಾರಿ ಮಾರ್ಗ ಒತ್ತುವರಿಯನ್ನು ತೆರವುಗೊಳಿಸುವಂತೆ ಸ್ಥಳೀಯ ನಿವಾಸಿಗಳು ಈ ಹಿಂದೆ ಸಭೆಯಲ್ಲಿ ತಿಳಿಸಿರುತ್ತಾರೆ. ಅದರಂತೆ ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಈ ವಿಷಯದ ಸಂಬಂಧ ಕ್ರಮ ಕೈಗೊಂಡಿರುವುದಾಗಿ ಸಭೆಯಲ್ಲಿ ತಿಳಿಸಿದರು.

- **ಬೆಸ್ಕಾಂ ಇಲಾಖೆಯ ವಿಷಯಗಳ ಬಗ್ಗೆ.**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯಲ್ಲಿ Underground power line connection ಕಾಮಗಾರಿಯು ಪ್ರಗತಿಯಲ್ಲಿದ್ದು, ಸದರಿ ಕಾಮಗಾರಿಯಿಂದ ರಸ್ತೆಯನ್ನು ಅಗೆದು ಸಮರ್ಪಕವಾಗಿ ರಸ್ತೆಯನ್ನು ಎಥಾಸ್ಥಿತಿಗೆ ತರಲು ಸಭೆಯಲ್ಲಿ ಹಾಜರಿದ್ದ ಬೆಳ್ಳಂದೂರು ವಾರ್ಡ್ ನಿವಾಸಿಗಳು ಸಭೆಯಲ್ಲಿ ತಿಳಿಸಿದರು. ಮುಂದುವರೆದು ಸದರಿ ಕಾಮಗಾರಿಗಳಲ್ಲಿ ಬಳಸಲಾದ ಬೃಹತ್ತಾಕರದ ರಿಮ್‌ಗಳನ್ನು ರಸ್ತೆಯ ಬದಿಗಳಲ್ಲಿಯೇ ಬಿಟ್ಟು ಸಾರ್ವಜನಿಕರಿಗೆ ಓಡಾಡಲು ತೊಂದರೆಯಾಗಿರುವುದಾಗಿ ಸಭೆಯಲ್ಲಿ ತಿಳಿಸಿದರು. ಸದರಿ ವಿಷಯದ ಸಂಬಂಧ ಬೆಸ್ಕಾಂ ಅಧಿಕಾರಿಗಳಿಗೆ ನಿಗದಿತ ಸಮಯದಲ್ಲಿ ಕ್ರಮ ಕೈಗೊಳ್ಳುವಂತೆ ಮಾನ್ಯ ಶಾಸಕರು ಸೂಚಿಸಿದರು.

- **ವಾರ್ಡ್ ಕಾಮಗಾರಿ ಹಾಗೂ ರಸ್ತೆ ಮೂಲಭೂತ ಸೌಕರ್ಯ ಇಲಾಖೆಯ ವಿಷಯಗಳ ಬಗ್ಗೆ:**

ಬೆಳ್ಳಂದೂರು ವಾರ್ಡ್ ವ್ಯಾಪ್ತಿಯ ಕೈಕೊಂಡ್ರಹಳ್ಳಿ ಗ್ರಾಮದ ಕಾಲೋನಿಯಲ್ಲಿ ರಸ್ತೆ ಕಾಮಗಾರಿಯನ್ನು ಭಾಗಶಃ ಮಾಡಿರುವುದಾಗಿ ಶ್ರೀ.ಪ್ರಶಾಂತ್ ಕೈಕೊಂಡ್ರಹಳ್ಳಿ ಗ್ರಾಮದ ಜನಪ್ರತಿನಿಧಿಗಳು ಸಭೆಯಲ್ಲಿ ತಿಳಿಸಿದರು. ಸಭೆಯಲ್ಲಿ ಹಾಜರಿದ್ದ ಸಹಾಯಕ ಅಭಿಯಂತರರು ಸದರಿ ಕಾಮಗಾರಿಯನ್ನು ಪ್ರಾರಂಭಿಸಿರುವುದಾಗಿ ಸಭೆಯಲ್ಲಿ ತಿಳಿಸಿದರು.

ಈ ಮೇಲಿನ ಎಲ್ಲಾ ಅಂಶಗಳಿಗೆ ಸಂಬಂಧಪಟ್ಟಂತೆ ಅಧಿಕಾರಿಗಳೊಂದಿಗೆ ಕೂಲಂಕುಶವಾಗಿ ಚರ್ಚಿಸಿದ್ದು, ಸದರಿ ವಿಷಯಗಳ ಬಗ್ಗೆ ಕ್ರಮ ಕೈಗೊಳ್ಳಲು ಸರ್ವಾನುಮತದಿಂದ ತೀರ್ಮಾನಿಸಿ ವಂದನೆಗಳೊಂದಿಗೆ ಈ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

25/10/21

ಕಾರ್ಯದರ್ಶಿಗಳು
ಮತ್ತು ಸಹಾಯಕ ಅಭಿಯಂತರರು
ವಾರ್ಡ್ ನಂ. 150 ಬೆಳ್ಳಂದೂರು.

ಅಧ್ಯಕ್ಷರು
ನೋಡೆಲ್ ಅಧಿಕಾರಿ,
ವಾರ್ಡ್ ನಂ. 150 ಬೆಳ್ಳಂದೂರು

Asst. Executive Engineer (E)
C. O&M S-11, Sub-Division BESCOM
HSR Layout, BANGALORE-560 102

**ಪ್ರತಿಯನ್ನು:**

1. *ಮಾನ್ಯ ಜಂಟಿ ಆಯುಕ್ತರು ಮಹದೇವಪುರ ವಲಯ, ಬಿಬಿಎಂಪಿ ರವರ ಅವಗಾಹನೆಗಾಗಿ ಸಲ್ಲಿಸಿದೆ.*
2. *ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.*
3. *ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.*
4. *ಕಛೇರಿ ಪ್ರತಿ.*



